ಮಾಡಿದರೆ ಅವ್ನ ಹೆಂಡ್ತಿಮಕ್ಳನ್ನ ನೀನೇ ನೋಡಿಕೊಳ್ಳಬೇಕಾದೀತು. ಅವನಿಗಿನ್ನೂ ಜವಾಬ್ದಾರಿ ಬಂದಿಲ್ಲ' ಎಂದು. ಅಪ್ಪನ ಈ ಮಾತು ಕೃಷ್ಣಪ್ಪನ ಕಿವಿತಮಟೆಗೂ ತಾಗಿದೆ. ಮುಂಬೈಯ ಮಕ್ಕಳು ಬಂದಾಗಲೆಲ್ಲಾ ಮಾಯಿಲನಿಗೆ ಕೃಷ್ಣಪ್ಪನ ಬಗ್ಗೆ ದೂರೊಪ್ಪಿಸದಿದ್ದರೆ ಉಂಡ ಅನ್ನ ಕರಗದಂತಹ ವೇದನೆ.

ಅಪ್ಪನ ದೂರುಮಾಲೆಗಳು ಮುಂಬೈಯ ಅಣ್ಣಂದಿರಿಗೂ ಕೃಷ್ಣಪ್ಪನಿಗೆ ಅಂತರ ಹೆಚ್ಚಿಸುವಲ್ಲಿ ಸಹಕರಿಸಿದ್ದವು. ವರ್ಷದಿಂದ ವರ್ಷಕ್ಕೆ ಕೃಷ್ಣಪ್ಪನೂ ಅಣ್ಣಂದಿರಲ್ಲಿ ಮಾತು ಕಡಿತಗೊಳಿಸುತ್ತಿದ್ದ. ಅಣ್ಣಂದಿರೂ ಅಷ್ಟೆ. ಕೋಲದ ದಿನ ಹತ್ತಿರ ಹತ್ತಿರ ಬರುತ್ತಿದ್ದಂತೆ ಕೃಷ್ಣ ಅಂತರ್ಮುಖಿಯಾಗುತ್ತಿದ್ದ. ಹಾಗೆಯೇ ಆತನಿಗೆ ದುಗ್ಗನನ್ನೊಳಗೊಂಡಂತೆ ಎಲ್ಲರಲ್ಲೂ ಒಂಥರಾ ದ್ವೇಷ ಏರುತ್ತಲೇ ಇತ್ತು.

ಕೋಲದ ದಿನ ಮನೆಯಲ್ಲೆಲ್ಲಾ ಸಡಗರ, ಅಂಗಳ ತುಂಬಾ ನೆಂಟರಿಷ್ಟರು, ಮಾತು, ನಗು. ಉಭಯ ಕುಶಲೋಪರಿ ಎಲ್ಲವೂ ಮುಂದುವರಿದಿತ್ತು. ಮಾಯಿಲ ಅತ್ತಿತ್ತ ಓಡಾಡುತ್ತಿದ್ದ. ಯಾಕಾಗಿ ಓಡಾಡುತ್ತಿದ್ದಾನೆ ಎಂಬುದು ಆತನಿಗೇ ತಿಳಿಯುತ್ತಿಲ್ಲ. ಆತನೆದೆಯಲ್ಲಿ ಅದೇನೋ ಒಂಥರಾ ಉದ್ವೇಗ, ಕೋಲ ನಿರ್ವಿಘ್ನವಾಗಿ ನೆರವೇರಲಿ ಎಂದು ಬಾರಿ ಬಾರಿ ಬೇಡುತ್ತಿದ್ದ. ಸ್ಥಾನದೊಳಗಿದ್ದ ಕಲ್ಲುರ್ಟಿಯಲ್ಲಿ, ಊರ ವಿಷ್ಣುಮೂರ್ತಿ ದೇವರಲ್ಲಿ.

ಮಾಯಿಲ ಹೆಜಮಾಡಿಯ ತಂತ್ರಿಗಳ ದಾರಿ ನೋಡುತ್ತಿದ್ದ. ಮುಂಜಾವದ ಕಾರ್ಯಕ್ರಮ 'ಭೂತ ಶುದ್ಧಿ' ಮಾಡುವುದು. ಅದಕ್ಕೆ ತಂತ್ರಿಗಳ ಮಂತ್ರವೇ ಬೇಕು. ತಂತ್ರಿಗಳು ಬರುವವರೆಗೂ ಮಾಯಿಲ ನೆಂಟರಿಷ್ಟರು ತಂದ ಹರಕೆಯ ಕೋಳಿಗಳನ್ನು ಬಿಗಿದಿಡಲು ಸೂಕ್ತ ಸ್ಥಳ ತೋರಿಸುವುದಕ್ಕಾಯೇ ಅತ್ತಿತ್ತ ಓಡಾಡುತ್ತಿದ್ದ.

ತಂತ್ರಿಗಳು ಬಂದು ಭೂತದ ಮನೆ ಶುದ್ಧಗೊಳಿಸಿದ ತಕ್ಷಣ ಅಡುಗೆ ಕೆಲಸ ಆರಂಭವಾಗಿತ್ತು. ಶುದ್ಧ ತರಕಾರಿ ಊಟ, ಮಾಯಿಲ ನಾಲ್ಕು ದಿನದಿಂದಲೇ ಮೀನು, ಕೋಳಿ ಮಾಂಸ ವರ್ಜಿಸಿ ಗಂಗಸರವನ್ನೂ ಮುಟ್ಟಿ ನೋಡಿರಲಿಲ್ಲ. ಸಂಜೆ ಐದರ ಒಳಗಡೆ ಊಟ ಮುಗಿಸಿಬಿಡಬೇಕೆಂದು ದುಗ್ಗನ ಆಜ್ಞೆಯಾಗಿತ್ತು.

ಚಾವಡಿಯಲ್ಲಿ ಊಟದ ಏರ್ಪಾಡು ನಡೆದಿತ್ತು. ಊಟ ಮುಗಿಯುತ್ತಿತ್ತಷ್ಟೆ. ದುಗ್ಗ ತನ್ನ ಪರಿವಾರದೊಂದಿಗೆ, ಸರಂಜಾಮುಗಳೊಂದಿಗೆ ಮನೆಯ ಅಂಗಳಕ್ಕೆ ಬಂದಿಳಿದ. ಚಾವಡಿಯಲ್ಲಿ ಕುಳಿತಿದ್ದವರಿಗೆಲ್ಲಾ ಶರಾಬಿನ ವಾಸನೆ ಗಮ್ಮೆಂದು ಬೀಸಿ ಬಂದು ಮೂಗಿಗೆ ಬಡಿಯಿತು. ಕಡಲಿನ ಕರೆಗಾಳಿ ಮೀನ ವಾಸನೆಯನ್ನು ಹೊತ್ತು ತರುವಂತೆ. ದುಗ್ಗ ಆಗಲೇ ಕಂಠಪೂರ್ತಿ ಕುಡಿದಿದ್ದ. ಆತನಿಗೆ ಕುಡಿಯದಿದ್ದರೆ ಯಾವ ಕೆಲಸವನ್ನೂ ಪರಿಪೂರ್ಣವಾಗಿ ಮಾಡಲಾಗುವುದಿಲ್ಲವೆಂದು ಆತನ ಮಡದಿ ಮಾಚುವೇ ಹೇಳುತ್ತಾಳೆ.

ಆ ದಿನ ದುಗ್ಗನ ಪರಿವಾರಕ್ಕೂ ಊಟದ ವ್ಯವಸ್ಥೆಯಿತ್ತು. ಅಂಗಳದಲ್ಲಿ ಕುಳಿತ ಅವನ ಪರಿವಾರದವರ ಬಟ್ಟಲಿಗೆ ಮಾಯಿಲನ ಸೊಸೆಯಂದಿರು ಊಟ ಸುರುವಿದರು. ದುಗ್ಗನ ಊಟ ಮುಗಿದೊಡನೆ ಮಾಯಿಲ ತಾನು ಮೊದಲೇ ಕೀಳಿಸಿಟ್ಟಿದ್ದ ತೆಂಗಿನ ಎಳೆಯ ಗರಿಗಳನ್ನು 'ಅಣಿ' ಹಾಗೂ 'ತಿರಿ' ಹೆಣೆಯಲು ದುಗ್ಗನ ಮುಂದೆ ತಂದಿಟ್ಟು ತಾನೂ ಅಲ್ಲೇ ಕುಕ್ಕರುಗಾಲಲ್ಲಿ ಕುಳಿತುಬಿಟ್ಟ. ಮಾಚು ಗರಿಗಳನ್ನು ಸೀಳಿ 'ತಿರಿ' ಕಟ್ಟಲು ಆರಂಭಿಸಿದರೆ ದುಗ್ಗ ಬಿದಿರಿನ ಅಟ್ಟೆಗೆ 'ಅಣಿ' ಹೆಣೆಯುವುದರಲ್ಲಿ ತಲ್ಲೀನನಾದ. ಮಾಯಿಲ ಆಗಲೇ ದುಗ್ಗನ ಪಕ್ಕದಲ್ಲಿ ತನ್ನ ಸುಖ ದುಃಖ ಆರಂಭಿಸಿದ್ದ.

ಗದ್ದೆ ಹೂಳುತ್ತಿದ್ದ ಕೋಣ ಹೂಳುತ್ತಿರುವಾಗಲೇ ದಡಕ್ಕನೆ ಬಿದ್ದು ಸತ್ತಿದ್ದು, ಹೆಂಡತಿ ಚಿಕ್ಕಟ್ಟು